ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ ರೈತರಿಗೆ ಮನೆಗಳನ್ನು ಒದಗಿಸುವುದು

2215: ಶ್ರೀ. ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕು ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ ಮುಳುಗಡೆಯಾದ ರೈತರಿಗೆ ಪುನರ್‌ವಸತಿ ಮುಖಾಂತರ ಜಮೀನು ಮತ್ತು ಮನೆಗಳನ್ನು ಒದಗಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು ? ಈ ಯೋಜನೆಯಡಿಯಲ್ಲಿ ಜಮೀನು ಕಳೆದುಕೊಂಡ ರೈತರಿಗೆ ಸರ್ಕಾರ ಒಂದು ಎಕರೆಗೆ (ಅಂದಾಜು) ನೀಡಿರುವ ಹಣವೆಷ್ಟು;

ಆ) ರಾಜ್ಯದ ಬೇರೆ ನೀರಾವರಿ ಯೋಜನೆಯಡಿಯಲ್ಲಿ (ಹೇಮಾವತಿ, ಕಬಿನಿ, ಕೃಷ್ಣ ಮೇಲ್ದಂಡೆ ಯೋಜನೆ, ಹಾರಂಗಿ) ಕಾಲುವೆ ಮತ್ತು ಮುಳುಗಡೆ ಪ್ರದೇಶಗಳನ್ನೊಳಗೊಂಡ ರೈತರಿಗೆ ಪ್ರತಿ ಎಕರೆಗೆ ಪುನರ್ ವಸತಿಗಾಗಿ ಒದಗಿಸಲಾಗಿರುವ ಹಣವೆಷ್ಟು ? (ವಿವರ ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಪುನರ್ವಸತಿ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಪುನರ್ವಸತಿ ಸಮಿತಿಯೊಂದನ್ನು 1989ರಲ್ಲಿ ನೇಮಕ ಮಾಡಿದ್ದು, 1014 ಎಕರೆ ಜಮೀನಿಗೆ ಪರಿಹಾರ, ಮಾಲ್ಕಿ ಪರಿಹಾರ ಮತ್ತು ಕಟ್ಟಡಗಳಿಗೆ ಪರಿಹಾರ ಪಾವತಿ ಮಾಡಲಾಗಿದೆ. ಇತ್ಯರ್ಥವಾಗಿರುವ ಪ್ರಕರಣಗಳಲ್ಲಿ ಪ್ರತಿ ಎಕರೆಗೆ ಸರಾಸರಿ ರೂ. 10,000 ರಂತೆ ಹಣ ನೀಡಲಾಗಿದೆ.

ಆ) ಹೇಮಾವತಿ ಯೋಜನೆಯಲ್ಲಿ ಎಕರೆಗೆ ರೂ.4,380–00 ಹಾರಂಗಿ ಮತ್ತು ಕಬಿನಿಗಳಲ್ಲಿ ಎಕರೆಗೆ ರೂ.7,000–00 ರಿಂದ ರೂ. 12,000 ವರೆಗೆ.

ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಎಕರೆಗೆ ರೂ.6,200.

ಅರ್ಕಾವತಿ ಜಲಾಶಯ ಯೋಜನೆಯಲ್ಲಿ ಖರ್ಚಾಗಿರುವ ಹಣ

2217: ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ಕನಕಪುರ ತಾಲ್ಲೂಕು ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು; (ವರ್ಷವಾರು ವಿವರ ಒದಗಿಸುವುದು)

2) ಏತ ನೀರಾವರಿ ಮುಖಾಂತರ ರೈತರಿಗೆ ನೀರನ್ನು ಒದಗಿಸಲು ಸರ್ಕಾರದವರು ಕೈಗೊಳ್ಳಲಾಗಿರುವ ಕ್ರಮವೇನು ? ರೈತರಿಗೆ ನೀರನ್ನು ಇನ್ನೂ ಎಷ್ಟು ತಿಂಗಳೊಳಗೆ ಒದಗಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

1) ವರ್ಷ	ವೆಚ್ಚ. (ಲಕ್ಷ ರೂ.ಗಳು)
1974–75	0.24
1975–76	5.38
1976–77	7.77
1977–78	6.67

1978–79		7.18	
1979–80		8.88	
1980–81		2.92	
1981–82		1.93	
1982–83		1.27	
1983–84		9.57	
1984–85		77.57	
1985–86		155.86	
1986–87		139.33	
1987–88		47.89	
1988–89		33.95	
1989–90		29.92	
1990–91		173.71	
1991–92		311.48	
1992–93		422.33	(2:93ರ ಕೊನೆಗೆ)
ಒಟ್ಟು	28–2–93ರವರೆಗೆ	1443–85	

ಅ) ಆರ್ಕಾವತಿ ಯೋಜನೆಯಡಿ ಎಡದಂಡೆ ಮತ್ತು ಬಲದಂಡೆ ಏತ ನೀರಾವರಿ ನಾಲೆಗಳಿದ್ದು, ಅವುಗಳ ಅಗೆತದ ಕೆಲಸ ಮತ್ತು ಅಡ್ಡ ಚರಂಡಿ ಕಾಮಗಾರಿಗಳು ಸದ್ಯದಲ್ಲೇ ಪ್ರಾರಂಭವಾಗಲಿವೆ. ನಾಲೆಗಳಿಂದ 1994–95ನೇ ಸಾಲಿನಲ್ಲಿ ರೈತರಿಗೆ ನೀರನ್ನು ಒದಗಿಸಲು ಯೋಜಿಸಲಾಗಿದೆ.

ಚಿಕ್ಕೋಡಿ ತಾಲ್ಲೂಕು ಪಟ್ಟಣಕುಡಿ ಹತ್ತಿರ ಸಣ್ಣ ನೀರಾವರಿ ಕೆರೆಗೆ ಮುಂಜೂರಾತಿ

2215: ಶ್ರೀ ಸುಭಾಸ್ ಜೋಶಿ (ನಿಪ್ಪಾಣಿ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕೋಡಿ ತಾಲ್ಲೂಕು, ಪಟ್ಟಣಕುಡಿ ಹತ್ತಿರ ಸಣ್ಣ ನೀರಾವರಿ ಕೆರೆಗೆ ಮಂಜೂರಾತಿ ದೊರೆತಿದೆಯೇ;

ಆ) ಹಾಗಿದ್ದಲ್ಲಿ, ಸಣ್ಣ ನೀರಾವರಿ ಕೆರೆಗೆ ಮಂಜೂರಾತಿ ಹಣವೆಷ್ಟು;

ಇ) ಕೆರೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದು.